ಉಪನ್ಯಾಸ ಗ್ರಂಥಮಾಲೆ

೫೧೨

ಜನಪದ ಹಾಡು ಮತ್ತು ಭಕ್ತಿ

ಡಾ. ದೇವೇಂದ್ರಕುಮಾರ ಹಕಾರಿ



ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಜೂನ ೨೦೦೪

ಉಪನ್ಯಾಸ ಗ್ರಂಥಮಾಲೆ

೫೧೨

ಜನಪದ ಹಾಡು ಮತ್ತು ಭಕ್ತಿ

ಡಾ. ದೇವೇಂದ್ರಕುಮಾರ ಹಕಾರಿ

ಶ್ರೀ ಬೀರಸಿದ್ಧೇಶ್ವರ ಗಾಯನ ಸಂಘ
ಮೂಡಲಗಿ ತಾ:ಗೋಕಾಕ ಜಿ:ಬೆಳಗಾವಿ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಕಾಶಕರು :

ಡಾ. ಶಿವಾನಂದ ಗಾಳಿ
ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ.

ಪ್ರಥಮ ಮುದ್ರಣ : ಜೂನ, ೨೦೦೪
೩೦೦೦ ಪ್ರತಿಗಳು

© ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಬೆಲೆ ರೂ. : ೫ = ೦೦

ಮುದ್ರಕರು :

ಡಾ. ಚಂದ್ರಮೌಳಿ ಎಸ್. ನಾಯ್ಕರ
ನಿರ್ದೇಶಕರು,
ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ,
ಧಾರವಾಡ.

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಪ್ರಸಾರಾಂಗದ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ ಉಪನ್ಯಾಸ ಗ್ರಂಥಮಾಲೆ ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ಏಳು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕ ಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು ಶಾಸ್ತ್ರಸಮ್ಮತವಾದ ಸರಣಿಯಲ್ಲಿ ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನ ಭಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆ ಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ, ಈ ನಮ್ಮ ಪ್ರಯತ್ನಕ್ಕೆ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರದ ಕಾರ್ಯದಲ್ಲಿ ಭಾಗವಹಿಸುವುದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವುದಲ್ಲದೆ ಎಂತಹ

ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೫೧೧ ಪುಸ್ತಿಕೆಗಳು ಪ್ರಕಟವಾಗಿವೆ. ಅವು ಅಚ್ಚಾಗಿ ಹೊರ ಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಿಕೆಗಳು ನಾಲ್ಕು ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ — **ಡಾ. ಎಂ. ಖಾಜಾಪೀರ್**

ಧಾರವಾಡ — *ಕುಲಪತಿಗಳು*

ಅರಿಕೆ

ಜನಪದ ಹಾಡು ಮತ್ತು ಭಕ್ತಿ ದಿ. ೨೮.೯.೧೯೯೯ ರಂದು ನಾನು ರಾಜನಾಳ ತಾಂಡಾದ ಶ್ರೀ ವೀರಭದ್ರೇಶ್ವರ ಯುವಕ ಮಂಡಳದಲ್ಲಿ ನಮ್ಮ ವಿಶ್ವವಿದ್ಯಾಲಯದ ೪೩೬ ನೇಯ ವ್ಯಾಸಾಂಗ ವಿಸ್ತರಣ ಉಪನ್ಯಾಸ ಶಿಬಿರದಲ್ಲಿ ನೀಡಿದ ಭಾಷಣದ ರೂಪ.

ಪ್ರಸಾರಾಂಗದ ಉಪನಿರ್ದೇಶಕ ಡಾ. ಹರಿಲಾಲ ಪವಾರ ಅವರ ಪ್ರೀತಿ ಒತ್ತಾಸೆಯ ಫಲವೇ ಈ ಪುಸ್ತಕೆ. ಇದನ್ನು ಮುದ್ರಣಕ್ಕೆ ಎತ್ತಿಕೊಂಡ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಮತ್ತು ಪ್ರಕಾಶನ ಸಮಿತಿಯ ಅಧ್ಯಕ್ಷ ಆಗಿರುವ ಡಾ. ಪಠಾನ್ ಮತ್ತು ಅಂದಿನ ನಿರ್ದೇಶಕ ಸಮಾಜವಿಜ್ಞಾನಿ ಮಿತ್ರ ಪ್ರೊ. ನಾಗೇಶ ಅವರಿಗೆ ನಾನು ಋಣಿ.

ದೇವೇಂದ್ರಕುಮಾರ ಹಕಾರಿ

೦೧.೦೩..೨೦೦೨
ಶ್ರೀನಗರ
ಧಾರವಾಡ

ಶ್ರೀ ಬೀರಸಿದ್ಧೇಶ್ವರ ಗಾಯನ ಸಂಘ
ಮೂಡಲಗಿ ತಾ:ಗೋಕಾಕ ಜಿ:ಬೆಳಗಾವಿ

ಜನಪದ ಹಾಡು

(ಭಕ್ತಿ - ಅನುಭಾವ)

ಹಾಡು ಹುಡಿಗೂಡಿಹೋಗಬಹುದಾದ ಇಂದಿನ ದಿನಮಾನಗಳಲ್ಲಿ ಜನಪದ ಹಾಡುಗಳಲ್ಲಿ ಭಕ್ತಿ-ಅನುಭಾವ ಕುರಿತು ಕೆಲವು ವಿಚಾರ ಹಂಚಿಕೊಳ್ಳುವುದು ಪ್ರಸ್ತುತ.

ಜಾನಪದ ವಿಷಯವನ್ನು ಸಾಮಾನ್ಯವಾಗಿ ಎರಡು ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸಬಹುದಾಗಿದೆ. ಒಂದು, ಜನಪದ ಸಾಹಿತ್ಯ, ಎರಡು, ಸಾಹಿತ್ಯೇತರ ಜಾನಪದ. ಜನಪದ ಹಾಡು ಜನಪದ ಸಾಹಿತ್ಯದ ಒಂದು ವ್ಯಾಪಕ ಪ್ರಪಂಚ. ಜನಪದ ಹಾಡುಗಳ ಪ್ರಪಂಚದ ವೈವಿಧ್ಯ ವಿಪುಲತೆಗಳು ದಂಗುಬಡಿಸುವಂಥವು. ಏಕೆಂದರೆ ಹಲವಾರು ವಿಭಾಗ-ಒಳವಿಭಾಗಗಳೂ ಉಂಟು. ಕುಟ್ಟುವ, ಬೀಸುವ ಹಾಡುಗಳಿಂದ ಹಿಡಿದು ಅಡುಗೆಮನೆಯಲ್ಲಿ ಲಕ್ಷ್ಮೀ ಕಂಬಕ್ಕೆ ಹೆಪ್ಪುಹಾಕಿದ ಮೊಸರನ್ನು ಕಡೆಯುವಾಗ, ಒಕ್ಕಲುತನದ ಹಿನ್ನಲೆಯ ನಾಟಿಹಾಡು, ಜೋಳ ಕೊಯ್ಯುವಾಗ, ತೆನೆ ಮುರಿಯುವಾಗ, ಹಂತಿ ತಿರುಗಿಸುತ್ತ ಒಂದು ಹಂತಿಯಿಂದ ಮತ್ತೊಂದು ಹಂತಿಗೆ ಖೋ ಕೊಟ್ಟಹಾಗೆ ಬೆಳ್ಳಂಬೆಳಗು ಕೇಳುವ ಹಂತೀಹಾಡು, ಹಬ್ಬಹರಿದಿನಗಳ, ಸೀಗೆ ಹುಣ್ಣಿಮೆಯ ಚರಗ ಚೆಲ್ಲುವ ಹಾಡು, ಪಂಚಮಿಹಬ್ಬ, ದೀವಳಿಗೆಗಳಲ್ಲಿ ಅಂಟಿಗೆ-ಪಂಟಿಗೆ-ಆಣಿ ಪೀಣಿ ಹಾಡುಗಳು, ದೇಶಭಕ್ತಿ, ರಾಷ್ಟ್ರಪ್ರೇಮದ ರಾಷ್ಟ್ರಾಭಿಮಾನದ ಹಾಡು ಇದೆಲ್ಲ ಒಂದು ವಿಶೇಷ ಅಧ್ಯಯನಕ್ಕೇ ವಸ್ತು.

ಆದರೂ ಅನುಭಾವಕ್ಕೆ ಸಂಬಂಧಿಸಿದಂತೆ ಸಂಕ್ಷಿಪ್ತವಾಗಿಯಾದರೂ ಕೆಲ
ಸಂಗಂತಿಗಳನ್ನು ವಿವೇಚಿಸಲಾಗಿದೆ, ವಿವರಿಸಲಾಗಿದೆ.

ಪ್ರೀತಿ ಮತ್ತು ಜೀವನ ಪ್ರೀತಿ ಜನಪದ ಹಾಡುಗಳ ಮೂ
ಸ್ತೋತ್ರ. ಪ್ರೀತಿ ಹೇಗೆ ಅನಂತವೊ ಅಪರಿಮಿತವಾಗಿ ತೋರುವುದೊ
ಆದೇ ರೀತಿ ಜನಪದ ಹಾಡುಗಳ ಮೂಲ ನೆಲೆ ಮತ್ತು ಸೆಲೆ ಕೂಡ.

ಪ್ರೀತಿಯ ಮೂಲ ಮನೋಭಾವ ನಿಷ್ಠೆ, ಶ್ರದ್ಧೆ ಮತ್ತು
ಸಮರ್ಪಣ, ತ್ಯಾಗ ಇತ್ಯಾದಿ ಶ್ರದ್ಧೆ, ತ್ಯಾಗಗಳಿಲ್ಲದೆ ಭಕ್ತಿಯಿಲ್ಲ
ಭಕ್ತಿಯಿಲ್ಲದೆ ಅನುಭಾವವಿಲ್ಲ. ಬದುಕಿನಲ್ಲಿ ಪರಸ್ಪರ ಒಲವು ಮಮತೆ,
ವಾತ್ಸಲ್ಯ ಮುಂತಾದ ಭಾವನೆಗಳು ಪ್ರೀತಿಗೆ ಪೂರಕವಾದ (ಪರ್ಯಾಯ)
ಪದಗಳಾಗಿವೆ.

ಆದರೆ ಪ್ರಪಂಚದ ಯಾವುದೇ ಭಾಗದಲ್ಲಿ ತಾಯಿ-ಮಕ್ಕಳಿಗಿರುವ
ಗಾಢ ಸಂಬಂಧ, ಮಗುವಿಗಾಗಿ ಅದರ ಬೆಳವಣಿಗೆಗಾಗಿ ಪಾಲನೆ
ಪೋಷಣೆಗಾಗಿ ತಾಯಿಯ ಜೀವ ಸದಾ ಚಡಪಡಿಸುವುದು ಅಥವಾ ಯಾವುದೇ
ತ್ಯಾಗಕ್ಕೂ ಅವಳು ಸಿದ್ಧಳಾಗಿರುವುದು ಪ್ರೀತಿಯ ಉದಾತ್ತ ರೂಪವಾಗಿ
ತೋರುತ್ತದೆ.

ಈ ಕಾರಣದಿಂದಲೇ ಅವರಿಗೆ ದಿವ್ಯ ಪ್ರೇಮದ ಅರಿವಾಗುವುದು.
ತಮ್ಮ ಪರಿಸರದ ಪ್ರತಿ ವಸ್ತುವಿನಲ್ಲಿಯೂ ಜನಪದರು ಯಾವುದೋ
ಒಂದು ಅಗೋಚರ ಶಕ್ತಿಯ ಕೈವಾಡವನ್ನು ಗುರುತಿಸುತ್ತಾರೆ. ಈ ಹಂತದಲ್ಲಿ
ತಮ್ಮ ಕಣ್ಣಿಗೆ ಕಂಡ, ಕೈಗೆ ಎಟುಕಿದ ಪ್ರತಿಯೊಂದು ವಸ್ತುವೂ ಅ
ಅಗೋಚರಶಕ್ತಿಯ ಸೃಷ್ಟಿಯಾಗಿ ತೋರುತ್ತದೆ. ಗುಡಿ ದೇವಾಲಯಗಳು
ಮಾನವನಿರ್ಮಿತವಾಗಿದ್ದರೂ ಕಾಡೆಲ್ಲ ಗಂಧದಿಂದ ತುಂಬಿದ ಅನುಭವ.

ಅದಕ್ಕೆ ಅವರು ತಮ್ಮ ಹಾಡುಗಳಲ್ಲಿ*

ಕೋಟಿ ಕಿರಣವ ಕಂಡೆ ಕೊರಳ ಲಿಂಗವ ಕಂಡೆ
ರುದ್ರ್ರನ ಕಂಡೆ ಸ್ವಾಮಿ ವನದಲ್ಲಿ ಮೇಲ್ಕೋಟೆ
ತೋಪ್ನಲ್ಲಿ ಕಂಡೆ (ಸ್ವಾಮಿ) ಶರಣರ

ಮಾತೃತ್ವ ಅಥವಾ ತಾಯ್ತನ ನಮ್ಮ ಬದುಕಿನ, ವಿಶೇಷತಃ ಕೌಟುಂಬಿಕ ಜೀವನದ ಬಹು ದೊಡ್ಡ ಪವಾಡ. ಒಂದು ರೀತಿಯಲ್ಲಿ ಜೀವನದ ಮುಂದುವರಿಕೆಗೆ ಸೃಷ್ಟಿಕರ್ತ ರೂಪಿಸಿದ ವಿಸ್ಮಯ ಕೂಡ.

ತಾಯಿಯ ಮೂಲಕವೇ ಎಲ್ಲ ಬಗೆಯ 'ಅನುಭವ'ಗಳನ್ನು ಪಡೆದು ಬೆಳೆದ ವ್ಯಕ್ತಿ ತಾಯಿ ಜೀವನ ಸಂವರ್ಧನೆಯ ಸಾಕಾರ ರೂಪವಾಗಿ ತನ್ನ ಕಣ್ಣೆದುರೇ ನಿಂತಾಗ ಮತ್ತು ಜೀವನದ ಹೊಣೆಗಾರಿಕೆಯನ್ನು ಹೊರಲು ಸಿದ್ಧನಾದಾಗ ತಾಯಿ ಅವನ/ಅವಳ ರಕ್ಷಣೆಗಾಗಿ ಎಂಥ ತ್ಯಾಗ ಬಲಿದಾನಗಳಿಗೂ ಸಿದ್ಧಳಾಗುತ್ತಾಳೆ. ಇದು ಪ್ರೀತಿಯ ರೀತಿ, ಸ್ವರೂಪ. ಜನಪದರಲ್ಲಿ ಹರಡಿಕೊಂಡಿರುವ ಪ್ರೀತಿಯ ಸ್ವರೂಪ ವಾಸ್ತವ ನೆಲೆಯನ್ನು ಮೀರಿದುದು.

ಕಾಲಾನಂತರ ಮಾನವ ಸಮುದಾಯ ತನ್ನ ಅಗತ್ಯಕ್ಕೆ ತಕ್ಕಂತೆ 'ಜೀಂ' ಎನ್ನುವ ಕಾಡನ್ನು ಕೊಚ್ಚಿ ಗುಡಿಸಲು ಮನೆ ಇತ್ಯಾದಿ ಕಟ್ಟಿಕೊಂಡು ಅವಶ್ಯಕತೆಗೆ ಅನುಗುಣವಾದ ಸಲಕರಣೆಗಳನ್ನು ತಾನೇ ನಿರ್ಮಿಸಿ ತನ್ನ ಸುತ್ತುಮುತ್ತೂ ತನಗೆ ತಾನೇ ಜರಗುವ ನಿಸರ್ಗ ಪರಿವರ್ತನೆಗಳಿಗೆ ಕಾಣದ ಶಕ್ತಿಯೇ ಕಾರಣ ಎಂದು ಗುರುತಿಸಿ, ಎಲ್ಲ ವಸ್ತು ವಿಷಯಗಳಲ್ಲಿ

---

* ಜನಪದ ಗೀತೆಗಳು, ಎಸ್. ಕೆ. ಕರೀಂಖಾನ್, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೬, ಪು. ೧೫.